# ಹಿರಿಯತನದಲಿ ನೋಡೆ ಊರುಗೋಲ ಹಿಡಿದವರು

ಯುಗಾದಿ ಪ್ರಬಂಧ ಸ್ಪರ್ಧೆ 2024

ತೀರ್ಪುಗಾರರು ಮೆಚ್ಚಿದ ಪ್ರಬಂಧ

◆ ಜಿ.ವಿ. ಅರುಣ

ಕಲೆ: ರಾಮಕೃಷ್ಣ ಸಿದ್ರಪಾಲ

ಪಶ್ಚಿಮ ಬಂಗಾಳದ ಕೆಲವು ಕಚೇರಿಗಳಲ್ಲಿ ಒಂದು ವಿಶೇಷವಾದ ಸಂಪ್ರದಾಯವಿದೆ. ಕೆಲಸದಿಂದ ನಿವೃತ್ತರಾಗುವವರಿಗೆ, ಬೀಳ್ಕೊಡುಗೆಯ ಸಮಾರಂಭದಲ್ಲಿ ಬೆತ್ತದ ಊರುಗೋಲನ್ನು ಕಾಣಿಕೆಯಾಗಿ ನೀಡುತ್ತಾರೆ. ಕೆಲವು ಕಚೇರಿಗಳಲ್ಲಂತೂ ನಿವೃತ್ತರಾಗುವ ನೌಕರರು ಬಿಳಿಯ ಕಚ್ಚೆಪಂಚೆ ಮತ್ತು ಬಿಳಿಯ ಕುರ್ತಾ ಹಾಕಿಕೊಂಡೇ ಅಂದು ಕಚೇರಿಗೆ ಬರುತ್ತಾರೆ. ಬೀಳ್ಕೊಡುಗೆ ಸಮಾರಂಭದ ಅನಂತರ ಆ ವೇಷಭೂಷಣದಲ್ಲಿ ಕೈಗೆ ಬಂದ ಹೊಸ ಊರುಗೋಲನ್ನು ಆಡಿಸುತ್ತಾ ಗತ್ತಿನಿಂದ ಅದನ್ನು ನೆಲಕ್ಕೆ ಊರಿ, ಠೀವಿಯಿಂದ ಕಚೇರಿಯಿಂದ ಹೊರಗೆ ಬರುತ್ತಾರೆ. ಹಿಂದಿ ಚಿತ್ರರಂಗದಲ್ಲಿ ನಟಿಸುತ್ತಿದ್ದ ಖ್ಯಾತ ಬಂಗಾಳಿ ನಟ ಉತ್ಪಲ್ ದತ್ ಅವರನ್ನು ಈ ಪೋಷಾಕಿನಲ್ಲಿ ನೆನೆಸಿಕೊಳ್ಳಿ. ಆಗ ಪಶ್ಚಿಮ ಬಂಗಾಳದ ಕಚೇರಿಯಿಂದ ನಿವೃತ್ತನಾಗಿ ಹೊರಬರುವ ನೌಕರನ ಚಿತ್ರ ತಾನಾಗಿಯೇ ನಿಮ್ಮ ಕಣ್ಣ ಮುಂದೆ ಬರುತ್ತದೆ.

ನಿವೃತ್ತರಾದ ದಿನ ಊರುಗೋಲನ್ನು ಹಿಡಿದು ಕಚೇರಿಯಿಂದ ಮನೆಗೆ ತೆರಳುವುದನ್ನು ಅಂಬೆಗಾಲಿಡುವ ಮಗುವು ಹೊಸ್ತಿಲನ್ನು ದಾಟುವುದಕ್ಕೆ ಸಮೀಕರಿಸಬಹುದು. ಅಂಬೆಗಾಲಿಕ್ಕುವ ಮಗು ಹೊಸ್ತಿಲನ್ನು ದಾಟಲು ಮೊದಲು ಬಹಳ ಕಷ್ಟಪಡುತ್ತದೆ. ಅನೇಕ ಬಾರಿ ಹೊಸ್ತಿಲಿನವರೆಗೆ ಹೋಗಿ ಹಿಂದಿರುಗುತ್ತದೆ. ಆದರೆ ಒಮ್ಮೆ ಅದನ್ನು ದಾಟಿದರೆ, ಖುಷಿಯಿಂದ ಕೇಕೆ ಹಾಕುತ್ತದೆ. ಆಗ ಅದಕ್ಕೆ ಏನನ್ನೋ ಗೆದ್ದ ಆನಂದ. ಮಗುವಿನ ಮುಂದಿನ ಓಡಾಟವು ಸಂಭ್ರಮದಿಂದ ಅಂದು ಪ್ರಾರಂಭವಾಗುತ್ತದೆ. ಅದೇ ರೀತಿ, ನಿವೃತ್ತರಾದವರು 'ಮಾರನೆಯ ದಿನದಿಂದ ಕಚೇರಿಗೆ ಮತ್ತೆ ಬರಬೇಕಾಗಿಲ್ಲ' ಎಂಬುದನ್ನು ಅರಿತು ಸಂತೋಷದಿಂದ ಮನೆಗೆ ತೆರಳಲು ಉಡುಗೊರೆಯ ಊರುಗೋಲು ನೆನಪಿಸುತ್ತದೆ. ನಿವೃತ್ತ ಜೀವನಕ್ಕೆ ಪಕ್ವವಾದ ಮನಸ್ಸು ಒಂದು ರೀತಿಯ ಶಾಂತತೆಯನ್ನು ಆನಂದವನ್ನು ಅನುಭವಿಸಬೇಕು. ಇಲ್ಲದಿದ್ದರೆ ನಿವೃತ್ತ ಜೀವನ ದುಃಖಮಯವಾಗುತ್ತದೆ. ಊರುಗೋಲು ಆ ದುಃಖವನ್ನು ಹೊಡೆದೋಡಿಸುವ ಸಂಕೇತದಂತೆ ಕಾಣುತ್ತದೆ.

ಒಮ್ಮೆ ಪಶ್ಚಿಮ ಬಂಗಾಳದ ಒಂದು ಕಚೇರಿಯ ಮುಖ್ಯಸ್ಥರು ನಿವೃತ್ತರಾಗುತ್ತಿದ್ದರು. ಅವರಿಗೆ ನಿವೃತ್ತರಾಗಲು ಇಷ್ಟವಿರಲಿಲ್ಲ. ಅದಕ್ಕೆ ಬೇಕಾದ ಮಾನಸಿಕ ಪೂರ್ವಸಿದ್ಧತೆಯನ್ನೂ ಅವರು ಮಾಡಿಕೊಂಡಿರಲಿಲ್ಲ. ಅದಕ್ಕೆ ಕಾರಣ 'ಸಂಸ್ಥೆಗೆ ತಾವೊಬ್ಬ ಎಂದೂ ಕಡೆಗಣಿಸಲಾಗದ ವ್ಯಕ್ತಿ' ಎಂದು ಅವರು ನಂಬಿಕೊಂಡುಬಿಟ್ಟಿದ್ದು. ಹಾಗಾಗಿ ಮುಖ್ಯ ಕಚೇರಿಗೆ ತಮ್ಮ ಸೇವಾವಧಿಯನ್ನು ಮತ್ತಷ್ಟು ಹೆಚ್ಚಿಸುವಂತೆ ಅನೇಕ ಬಾರಿ ವಿನಂತಿ ಮಾಡಿ ಪತ್ರ ಬರೆದಿದ್ದರು. ಅವುಗಳು ಯಾವುದಕ್ಕೂ ಉತ್ತರ ಬಂದಿರಲಿಲ್ಲ. ಆದರೆ ಇವರ ಆಸೆ ಮಾತ್ರ ಒಂದಿಷ್ಟು ಕುಂದಿರಲಿಲ್ಲ. ಆದರೆ ಏನು ಮಾಡುವುದು? ನಿವೃತ್ತಿಯ ದಿನ ಬಂದೇ ಬಿಟ್ಟಿತು. ಬೀಳ್ಕೊಡುಗೆ ಸಮಾರಂಭದಲ್ಲಿ ಅವರ ಬಗ್ಗೆ ಗುಣಗಾನ ಮಾಡಿ ಕೊನೆಗೆ ಅವರ ಕೈಗೆ ಒಂದು ಬೆತ್ತದ ಊರುಗೋಲನ್ನು ನೀಡಿದರು. ಅಷ್ಟು ಹೊತ್ತು ದರ್ಪದಿಂದ ಕುಳಿತಿದ್ದ ಆ ಮನುಷ್ಯ ಇದ್ದಕ್ಕಿದ್ದಂತೆ ಜೋರಾಗಿ ಬಿಕ್ಕಿಬಿಕ್ಕಿ ಅಳಲು ಪ್ರಾರಂಭಿಸಿಬಿಟ್ಟರು. 'ಕೊನೆಗೂ ಇದು ನನ್ನ ಕೈಗೆ ಬಂದೇ ಬಿಟ್ಟಿತು' ಎಂದು ಗೋಳಾಡಿದರು. ಸೇವಾ ನಿವೃತ್ತಿಯನ್ನು ಸ್ವೀಕರಿಸಲಾಗದವರ ಪರಿಸ್ಥಿತಿ ಇದು. ದರ್ಪಿಷ್ಟರಾಗಿದ್ದರಂತೂ ನಿವೃತ್ತಿಯ ಅನಂತರ ಕಚೇರಿಯಲ್ಲಿ ಯಾರೂ ಅವರ ಆಜ್ಞೆಗೆ ತಲೆಬಾಗುವುದಿರಲಿ, ಮಾತನ್ನು ಸಹ ಆಡಿಸುವುದಿಲ್ಲ. ಅದಕ್ಕೆ ಹೇಳುವುದು, ಕೆಲಸದಲ್ಲಿದ್ದಾಗ 'ನೀವಿಲ್ಲಿ ಇಂದ್ರ', ನಿವೃತ್ತಿಯ ಅನಂತರ 'ನೀವು ಇಲ್ಲಿ ಇದ್ರಾ?' ಹಾಗಾಗಿ ಅವರ ಕೈಗೆ ಬಂದ ಊರುಗೋಲೇ ಅವರಿಗೆ ಪರಿಸ್ಥಿತಿಯನ್ನು ತಿಳಿಯಪಡಿಸುವ ಆಧಾರವಾಗುತ್ತದೆ.

ಉತ್ಪಲ್ ದತ್ ಅವರನ್ನು ನೆನೆಸಿಕೊಂಡ ತಕ್ಷಣ ವಾಕಿಂಗ್ ಸ್ಟಿಕ್‌ಗೆ ಹೆಸರಾದ ಮತ್ತೊಬ್ಬ ಮೇರುನಟ ಎಂದರೆ ಆಂಗ್ಲ ಭಾಷೆಯ ಚಾರ್ಲಿ ಚಾಪ್ಲಿನ್. ಅವನನ್ನು ನೆನೆಸಿಕೊಂಡಾಗಲೆಲ್ಲ ಕಣ್ಣ ಮುಂದೆ ಬರುವುದು ಅವನು ಹಾಕಿಕೊಳ್ಳುತ್ತಿದ್ದ ಹ್ಯಾಟ್ ಮತ್ತು ಕೈಯಲ್ಲಿ ಹಿಡಿದುಕೊಳ್ಳುತ್ತಿದ್ದ ವಾಕಿಂಗ್ ಸ್ಟಿಕ್. ಅದನ್ನು ಹಿಡಿದು ಒಂದು ಕಾಲನ್ನು ಅಡ್ಡವಾಗಿ ಹಾಕಿ ನಿಲ್ಲುತ್ತಿದ್ದ ಭಂಗಿಯೇ ನಗುವನ್ನು ತರಿಸುತ್ತಿತ್ತು.

ಊರುಗೋಲು ನಡೆಯಲು ಸಹಾಯ ಮಾಡುವ ಉಪಕರಣವಾಗಿ ಮೊದಲು ಉಪಯೋಗಕ್ಕೆ ಬಂತು. ಆದರೆ ಇಂಗ್ಲೆಂಡಿನಲ್ಲಿ ವಿಕ್ಟೋರಿಯನ್ ಯುಗದಲ್ಲಿ ಊರುಗೋಲನ್ನು ಹಿಡಿದು ನಡೆಯುವುದನ್ನು ಸಿರಿವಂತರು ಫ್ಯಾಷನ್ ಆಗಿ ಮಾಡಿಕೊಂಡಿದ್ದರು. ಆ ಸಮಯದಲ್ಲಿ ಇಂಗ್ಲೆಂಡಿನ ಖ್ಯಾತ ವೈದ್ಯರುಗಳು ವಿವಿಧ ಮಾದರಿಯ ಊರುಗೋಲುಗಳನ್ನು ಹಿಡಿದು ಓಡಾಡುತ್ತಿದ್ದರಂತೆ. ಆಗ ಆ ಊರುಗೋಲಿಗೆ ಕಲೆಯ ಸುಂದರತೆಯೂ ಕರಕುಶಲತೆಯ ಮೆರುಗೂ ಬೆಸೆದುಕೊಂಡವು. ವಿವಿಧ ವಸ್ತುಗಳಿಂದ, ವಿವಿಧ ಮಾದರಿಗಳ ಊರುಗೋಲನ್ನು ತಯಾರುಮಾಡುವ ವಿಧಾನಗಳು ಬಳಕೆಗೆ ಬಂದವು. ಕೋಲಿನ ಮೇಲೆ ಚಿತ್ತಾರದ ಕುಸುರಿಗೆಲಸ, ಆನೆಯ ದಂತದ ಜೋಡಣೆ, ವಿವಿಧ ಬಣ್ಣದ ಹರಳುಗಳ ಅಲಂಕಾರ, ಬೆಳ್ಳಿ ಹಾಗೂ ಚಿನ್ನದ ಲೇಪನ, ಹೀಗೆ ಐಶ್ವರ್ಯವಂತರ ಬೇಡಿಕೆಗೆ